# ಸ್ಥಳೀಯ ಸ್ವಯಂ-ಸರ್ಕಾರದಲ್ಲಿ ಚುನಾಯಿತ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಸವಾಲುಗಳು

ಶ್ರೀನಿವಾಸ ಬಿ.ಎಸ್.

ಅತಿಥಿ ಉಪನ್ಯಾಸಕರು, ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು.

DOI: https://doi.org/10.5281/zenodo.16678788

## ABSTRACT:

ಭಾರತ ಸಂವಿಧಾನದ ೭೩ನೇ ತಿದ್ದುಪಡಿಯು ಸ್ಥಳೀಯ ಸ್ವಯಂ-ಸರ್ಕಾರಗಳಲ್ಲಿ ಮಹಿಳೆಯರಿಗೆ ಮೀಸಲಾತಿಯನ್ನು ಕಲ್ಪಿಸಿಕೊಟ್ಟಿದೆ. ಇದು ಮಹಿಳೆಯರಿಗೆ ರಾಜಕೀಯವಾಗಿ ಭಾಗವಹಿಸಲು ಮತ್ತು ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಅವಕಾಶವನ್ನು ಒದಗಿಸಿದೆ. ಹಾಗೂ ಇದು ಮಹಿಳಾ ಸಬಲೀಕರಣಕ್ಕೂ ಕಾರಣವಾಗಿದೆ. ಪಂಚಾಯಿತಿಗಳಿಗೆ ಆಯ್ಕೆಯಾದ ಮಹಿಳೆಯರೆಲ್ಲರೂ ಒಂದೇ ರೀತಿಯಲ್ಲಿ ಆಡಳಿತ ಮಾಡಲು ಸಾಧ್ಯವಾಗಿರುವುದಿಲ್ಲ. ಏಕೆಂದರೆ ಈ ಮಹಿಳೆಯರು ಎಲ್ಲಾ ವರ್ಗ, ಜಾತಿ, ಮತ, ಧರ್ಮವನ್ನು ಪ್ರತಿನಿಧಿಸುತ್ತಿದ್ದಾರೆ. ಇವರ ಆಲೋಚನಾ ಕ್ರಮ, ನಿರ್ಧಾರ ತೆಗೆದುಕೊಳ್ಳುವಲ್ಲಿ ಸಾಕಷ್ಟು ವ್ಯತ್ಯಾಸಗಳನ್ನು ಕಾಣುತ್ತೇವೆ. ಅಕ್ಷರಸ್ಥ ವಿದ್ಯಾವಂತ ಮಹಿಳೆಯರ ಆಲೋಚನಾ ಕ್ರಮ ಒಂದು ರೀತಿ ಇದ್ದರೆ ಅನಕ್ಷರಸ್ಥ ಅವಿದ್ಯಾವಂತ ಮಹಿಳೆಯರ ಆಲೋಚನಾ ಕ್ರಮ ಇನ್ನೊಂದು ರೀತಿ ಇರುತ್ತದೆ. ಇಬ್ಬರೂ ಮಹಿಳೆಯರೇ ಆಗಿರುತ್ತಾರೆ. ಆದರೆ ಅವರ ಚಿಂತನೆ-ನಡುವಳಿಕೆ, ಆಡಳಿತದಲ್ಲಿ ತೆಗೆದುಕೊಳ್ಳುವ ನಿರ್ಧಾರಗಳಲ್ಲಿ ಸಾಕಷ್ಟು ಸಮಸ್ಯೆ ಮತ್ತು ಸವಾಲುಗಳನ್ನ ಕಾಣುತ್ತೇವೆ. ಈ ಸಮಸ್ಯೆ ಮತ್ತು ಸವಾಲುಗಳು ಎರಡು ವರ್ಗದ ಮಹಿಳೆಯರನ್ನು ಕೇಂದ್ರೀಕರಿಸಿ ಬರುತ್ತವೆ. ಹಾಗಾಗಿ ಪಂಚಾಯಿತಿಯ ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ ಮತ್ತು ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿರುವ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ಒಂದಲ್ಲಾ ಒಂದು ರೀತಿಯಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

## KEYWORDS:

ಸ್ಥಳೀಯ ಸ್ವಯಂ-ಸರ್ಕಾರ, ಮಹಿಳೆಯರು, ಮೀಸಲಾತಿ, ಸಮಾನತೆ, ಸಬಲೀಕರಣ.

ಸ್ಥಳೀಯ ಸ್ವಯಂ–ಸರ್ಕಾರಗಳಲ್ಲಿ ಕಾರ್ಯನಿರ್ವಹಿಸುವ ಮಹಿಳಾ ಸದಸ್ಯರು ಸ್ವಂತ ನಿರ್ಧಾರ ಕೈಗೊಂಡು ಅಭಿವೃದ್ಧಿ ಕಾರ್ಯಗಳನ್ನು ಮಾಡಿಸಲು ಸಾಧ್ಯವಾಗಿರುವುದಿಲ್ಲ. ಏಕೆಂದರೆ ಇಲ್ಲಿ ಆಯ್ಕೆಯಾಗಿರುವ ಕೆಲವು ಮಹಿಳೆಯರು ಅನಕ್ಷರಸ್ಥರಾಗಿರುತ್ತಾರೆ. ಮಹಿಳಾ ಸದಸ್ಯರು ತನ್ನ ಮನೆಯ ಪುರುಷ ಸದಸ್ಯರ ಮೇಲೆ ಅವಲಂಬಿತರಾಗಿರುತ್ತಾರೆ. ಕುಟುಂಬದಲ್ಲಿನ ಯಜಮಾನ, ಮಾವ, ಸಹೋದರ, ಮೈದುನ, ಮಗ ಇವರುಗಳು ಹಸ್ತಕ್ಷೇಪ ಮಾಡುತ್ತಿದ್ದಾರೆ. ಇನ್ನು ಕೆಲವು ಮಹಿಳಾ ಸದಸ್ಯರು ಧೈರ್ಯವಂತರು, ಬುದ್ಧಿವಂತರು, ವಿದ್ಯಾವಂತರಾಗಿದ್ದರೂ ಸಹ ಮಹಿಳೆಯರಿಗೆ ಸ್ವಂತ ಸಭೆಗಳಿಗೆ ಹಾಜರಾಗುವುದಕ್ಕಾಗಲಿ, ಪುರುಷ ಸದಸ್ಯರು ಹಾಗೂ ಅಧಿಕಾರಿಗಳ ಜೊತೆ ಚರ್ಚಿಸುವುದಕ್ಕಾಗಲಿ, ಫಲಾನುಭವಿಗಳನ್ನು ಆಯ್ಕೆ ಮಾಡುವುದಕ್ಕಾಗಲಿ, ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದಕ್ಕಾಗಲಿ ಯಾವುದೇ ರೀತಿಯ ಸ್ವಾತಂತ್ರ್ಯ ಮತ್ತು ಅಧಿಕಾರವನ್ನು ನೀಡಿರುವುದಿಲ್ಲ. ಈ ಎಲ್ಲಾ ಕಾರ್ಯಗಳನ್ನು ಅವರ ಕುಟುಂಬದ ಸದಸ್ಯರು ಅಂದರೆ ಅದರಲ್ಲೂ ಮುಖ್ಯವಾಗಿ ಮಹಿಳಾ ಸದಸ್ಯರ ಯಜಮಾನರು ನಿರ್ವಹಿಸುತ್ತಿರುವುದನ್ನು ಕಾಣುತ್ತೇವೆ. ರಾಷ್ಟ್ರೀಯ ಮತ್ತು ಪ್ರಾದೇಶಿಕ ರಾಜಕೀಯ ಪಕ್ಷಗಳಲ್ಲಿ ಕಾರ್ಯದರ್ಶಿಗಳಾಗಿ, ಸದಸ್ಯರಾಗಿ ಕಾರ್ಯನಿರ್ವಹಿಸುವಂತಹ ಪುರುಷರು ಈಗಾಗಲೇ ಪಂಚಾಯಿತಿಯ ಕೆಲಸ ಕಾರ್ಯದಲ್ಲಿ ಸಾಕಷ್ಟು ಅನುಭವ ಹೊಂದಿರುತ್ತಾರೆ. ಮತ್ತು ಅವರು ಮೀಸಲಾತಿಯಿಂದ ಅವಕಾಶ ಸಿಗದಂತಹ ಪುರುಷರಾಗಿರುತ್ತಾರೆ. ಅಂತಹವರು ತಮ್ಮ ಹೆಂಡತಿಯರನ್ನು, ತಾಯಿಯರನ್ನು, ಸೊಸೆಯರನ್ನು, ಅತ್ತಿಗೆಯರನ್ನು, ಮಗಳನ್ನು ಸ್ಥಳೀಯ ಸ್ವಯಂ–ಸರ್ಕಾರಗಳ ಚುನಾವಣೆಗೆ ನಿಲ್ಲಿಸಿ ಗೆಲ್ಲಿಸುವ ಮೂಲಕ ಅಧಿಕಾರದಲ್ಲಿ ಹಸ್ತಕ್ಷೇಪವನ್ನು ಮಾಡುತ್ತಿದ್ದಾರೆ. ಇದು ಮಹಿಳೆಯರಿಗೆ ದೊಡ್ಡ ಸಮಸ್ಯೆಯಾಗಿ ಕಂಡುಬರುತ್ತದೆ. ಮಹಿಳೆಯರಿಗೆ ಪಂಚಾಯಿತಿಯನ್ನು ನಿರ್ವಹಿಸುವಂತಹ ಸಾಮರ್ಥ್ಯವಿದ್ದರೂ ಅವರ ಕುಟುಂಬದಲ್ಲಿನ ಪುರುಷರು ಅವಕಾಶ ಮಾಡಿಕೊಡುವುದಿಲ್ಲ.

**ಸ್ಥಳೀಯ ಸ್ವಯಂ–ಸರ್ಕಾರಗಳಲ್ಲಿ ಚುನಾಯಿತ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು:**

ಸ್ಥಳೀಯ ಸ್ವಯಂ–ಸರ್ಕಾರಗಳ ಚುನಾಯಿತ ಮಹಿಳಾ ಸದಸ್ಯರು ಶಿಕ್ಷಣದ ಕೊರತೆಯಿಂದಾಗಿ ಅವರಲ್ಲಿ ಧೈರ್ಯ, ತಿಳುವಳಿಕೆ ಮತ್ತು ರಾಜಕೀಯ ಜ್ಞಾನದ ಅರಿವಿನ ಕೊರತೆ ಎದ್ದು ಕಾಣುತ್ತಿದೆ. ಈ ರೀತಿಯ ಸಮಸ್ಯೆ ಹೊಂದಿರುವಂತಹ ಮಹಿಳೆಯರು ಸಭೆಗಳಲ್ಲಿ ಧೈರ್ಯವಾಗಿ ಮಾತನಾಡಲು ಮತ್ತು ಪುರುಷ ಸದಸ್ಯರನ್ನು, ಅಧಿಕಾರಿಗಳನ್ನು ಪ್ರಶ್ನಿಸಲು ಸಾಧ್ಯವಾಗುತ್ತಿಲ್ಲ. ಹಾಗೂ ಸರ್ಕಾರದಿಂದ ಬರುವ ಅನುದಾನದ ಬಗ್ಗೆ, ಲೆಕ್ಕ ಪತ್ರಗಳು ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಪರಿಶೀಲಿಸಲು ಆಗುತ್ತಿಲ್ಲ. ಜೊತೆಗೆ ಸರ್ಕಾರದಿಂದ ಬರುವ ಮಾಹಿತಿಗಳನ್ನ ಓದಿ

ತಿಳಿದುಕೊಳ್ಳಲು ಸಾಧ್ಯವಾಗದೆ ಪರಿತಪಿಸುತ್ತಿದ್ದಾರೆ. ಶಿಕ್ಷಣ ಪಡೆಯದೆ ಇರುವುದರಿಂದ ಅಧಿಕಾರಿಗಳ ಮೋಸದ ಜಾಲಕ್ಕೆ ಸಿಲುಕಿ ನರಳುತ್ತಿದ್ದಾರೆ.

ಚುನಾಯಿತ ಮಹಿಳೆಯರಿಗೆ ಸರ್ಕಾರದ ಮೂಲಕ ಪಂಚಾಯಿತಿಗಳಿಗೆ ಬಂದಿರುವಂತಹ ಯೋಜನೆಗಳ ಬಗ್ಗೆ ಅರಿವು ಇರುವುದಿಲ್ಲ. ವಿದ್ಯಾವಂತ ಮತ್ತು ಅನಕ್ಷರಸ್ಥ ಮಹಿಳೆಯರಿಬ್ಬರು ಸಂಪೂರ್ಣ ಯೋಜನೆಗಳ ಬಗ್ಗೆ ತಿಳಿದುಕೊಳ್ಳುವಲ್ಲಿ ಸೋಲುತ್ತಾರೆ. ಪಂಚಾಯಿತಿಗಳಲ್ಲಿ ಪುರುಷ ಸದಸ್ಯರು ಮಹಿಳಾ ಸದಸ್ಯರಿಗೆ ಸರಿಸಮಾನವಾಗಿ ನೋಡಿಕೊಳ್ಳದಿರುವುದೇ ಒಂದು ಸಮಸ್ಯೆಯಾಗಿ ಕಂಡುಬರುತ್ತದೆ. ಕೆಲವು ಪಂಚಾಯಿತಿಗಳ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಪಂಚಾಯಿತಿಯ ಕಾರ್ಯದರ್ಶಿಗಳು ಚುನಾಯಿತ ಮಹಿಳೆಯರಿಗೆ ಸರಿಯಾದ ರೀತಿಯಲ್ಲಿ ಸರ್ಕಾರದ ಸವಲತ್ತುಗಳ ಬಗ್ಗೆ ಸರಿಯಾಗಿ ತಿಳಿಸಿರುವುದಿಲ್ಲ. ಆದ್ದರಿಂದ ಚುನಾಯಿತ ಮಹಿಳೆಯರಿಗೂ ಮತ್ತು ಇವರಿಗೂ ಹೊಂದಾಣಿಕೆಯಿರುವುದಿಲ್ಲ. ಎಲ್ಲಿ ಇವರಲ್ಲಿ ಹೊಂದಾಣಿಕೆ ಇರುವುದಿಲ್ಲವೋ ಅಂತಹ ಕಡೆ ಸಮಸ್ಯೆಗಳು ಉದ್ಭವವಾಗುತ್ತವೆ.

ಚುನಾಯಿತ ಮಹಿಳೆಯರು ಕುಟುಂಬದೊಳಗೆ ಜಾಸ್ತಿ ಗುರುತಿಸಿಕೊಂಡಿರುತ್ತಾರೆ. ಕೆಲವು ಮಹಿಳೆಯರು ಗ್ರಾಮ ಪಂಚಾಯಿತಿ ಸದಸ್ಯಳಾದ ಮೇಲೆ ಕುಟುಂಬದಿಂದ ಹೊರಗೆ ಬರುತ್ತಿದ್ದಾಳೆ. ಅದು ಒಬ್ಬಳೇ ಬರುವುದಿಲ್ಲ. ಯಾವಾಗಲೂ ಕುಟುಂಬದ ಪುರುಷ ಸದಸ್ಯರ ಜೊತೆ ಬರುತ್ತಾರೆ. ಹಾಗಾಗಿ ಎಲ್ಲಿಯೋ ಒಂದು ಕಡೆ ಪುರುಷನ ಹಿಡಿತದಲ್ಲಿರುವ ಚುನಾಯಿತ ಮಹಿಳೆಯರು ಸಮಸ್ಯೆಗಳಿಗೊಳಗಾಗುತ್ತಾರೆ. ಕುಟುಂಬದ ನಿರ್ವಹಣೆಯ ಜೊತೆ ಪಂಚಾಯಿತಿಯ ನಿರ್ವಹಣೆಯನ್ನು ಮತ್ತು ಆಡಳಿತವನ್ನು ನೋಡಿದಾಗ ಹೆಚ್ಚಿನ ಮಹಿಳೆಯರು ಕುಟುಂಬಕ್ಕೆ ಮೊದಲ ಆದ್ಯತೆ ಕೊಡುತ್ತಾರೆ. ಎರಡನೇ ಆದ್ಯತೆಯನ್ನು ಪಂಚಾಯಿತಿಗೆ ನೀಡುತ್ತಾರೆ. ಆದ್ದರಿಂದ ಇದೊಂದು ಸಮಸ್ಯೆಯಾಗಿ ಕಂಡುಬರುತ್ತದೆ.

ಸ್ಥಳೀಯ ಸ್ವಯಂ–ಸರ್ಕಾರಗಳಿಗೆ ಮೀಸಲಾತಿ ಅಡಿಯಲ್ಲಿ ಪರಿಶಿಷ್ಟ ವರ್ಗದ ಮಹಿಳೆಯರು ಸದಸ್ಯರಾಗಿ ನೇಮಕವಾಗುತ್ತಾರೆ. ಇವರು ಹೆಚ್ಚಿನದಾಗಿ ಬಡತನದ ರೇಖೆಯಲ್ಲಿರುತ್ತಾರೆ. ಇವರು ಜೀವನೋಪಾಯಕ್ಕಾಗಿ ದಿನವಿಡೀ ಜಮೀನಿನಲ್ಲಿ ಕೆಲಸ ಮಾಡಿಕೊಂಡೋ, ಬೇರೆಯವರ ಜಮೀನುಗಳಿಗೆ ಕೂಲಿ ಹೋಗಿಕೊಂಡೋ ಬದುಕುವ ಸ್ಥಿತಿ ಇರುತ್ತದೆ. ಇಂತಹ ಹಿನ್ನೆಲೆಯಿಂದ ಬಂದವರು ಮೊದಲ ಆದ್ಯತೆಯನ್ನು ದುಡಿಯುವುದಕ್ಕೆ ಕೊಡುತ್ತಾರೆ. ಎರಡನೇ ಆದ್ಯತೆಯನ್ನು ಗ್ರಾಮ ಪಂಚಾಯಿತಿಗೆ ಕೊಡುತ್ತಾರೆ. ಇಂತಹ ಕಡೆ ದುಡಿಯುವ ವರ್ಗದ ಹಿನ್ನೆಲೆಯಿಂದ ಬಂದ ಪಂಚಾಯಿತಿ ಮಹಿಳೆಯರು ಸೋಲುತ್ತಾರೆ. ಅವರು ಕೂಡ

ಅಸಹಾಯಕರಾಗುತ್ತಾರೆ. ಇದು ನೇರವಾಗಿ ಎಲ್ಲಿಯೂ ಕಂಡುಬರದಿದ್ದರೂ ಕೂಡ ಪರೋಕ್ಷವಾಗಿ ತನ್ನ ಅಸ್ತಿತ್ವ ಉಳಿಸಿಕೊಂಡಿದೆ ಎಂದು ಹೇಳಬಹುದಾಗಿದೆ.

ಕೃಷಿ ಕುಟುಂಬಗಳಿಂದ ಬಂದಂತಹ ಚುನಾಯಿತ ಮಹಿಳೆಯರು ಜನರ ಒತ್ತಾಯದಿಂದ ಪಂಚಾಯಿತಿಯ ಸದಸ್ಯರಾಗಿ ಆಯ್ಕೆಯಾಗುತ್ತಾರೆ. ಪಂಚಾಯಿತಿ ಸದಸ್ಯರಾಗುವುದಕ್ಕಿಂತ ಮುಂಚೆ ಇವರು ಹೆಚ್ಚಿನ ಸಮಯವನ್ನು ಕೃಷಿ ಕೆಲಸದಲ್ಲಿ ಕಳೆಯುತ್ತಿದ್ದರು. ಹಾಗಾಗಿ ಈಗಲೂ ಅವರು ಕೃಷಿ ಕ್ಷೇತ್ರದ ಜೊತೆಗೆ ತುಂಬಾ ಅವಿನಾಭಾವ ಸಂಬಂಧ ಇಟ್ಟುಕೊಂಡಿರುತ್ತಾರೆ. ಇಂತಹವರು ಗ್ರಾಮ ಪಂಚಾಯಿತಿಯ ಕೆಲಸ ಕಾರ್ಯಗಳು ಮತ್ತು ಯೋಜನೆಗಳ ಬಗ್ಗೆ ತಿಳಿದುಕೊಳ್ಳುವಲ್ಲಿ ಎಲ್ಲಿಯೋ ಒಂದು ಕಡೆ ಸೋಲುತ್ತಾರೆ.

ಎಷ್ಟೋ ಮಹಿಳೆಯರು ಗ್ರಾಮ ಪಂಚಾಯಿತಿ ಸಭೆಗಳಿಗೆ ಹಾಜರಾದರೂ ಕೂಡ ಸಭೆಯಲ್ಲಿ ಒಂದು ಮಾತನಾಡುವುದಿಲ್ಲ. ಏಕೆಂದರೆ ಸಾರ್ವಜನಿಕವಾಗಿ ಮಾತನಾಡಲು ತುಂಬಾ ಹೆದರುವ ಮಹಿಳೆಯರು ಇದ್ದಾರೆ. ಹಾಗಾಗಿ ಇದು ಒಂದು ಸಮಸ್ಯೆಯಾಗಿ ಕಂಡುಬರುತ್ತದೆ. ಇನ್ನು ಕೆಲವು ಮಹಿಳೆಯರಿಗೆ ಜಾತಿ-ವೈಷಮ್ಯ ಇರುತ್ತದೆ. ಹಲವು ಜಾತಿಯ ಮಹಿಳೆಯರು ಒಂದು ಕಡೆ ಸೇರುತ್ತಾರೆ. ಅಂತಹ ಸಂದರ್ಭದಲ್ಲಿ ಮುಕ್ತವಾಗಿ ಎಲ್ಲರೂ ಸೇರಿ ಮಾತನಾಡಿ ಪಂಚಾಯಿತಿ ಬಗ್ಗೆ ತಿಳಿದುಕೊಳ್ಳುವಲ್ಲಿ ಸೋಲುತ್ತಾರೆ. ಹಾಗಾಗಿ ಇದೊಂದು ಸಮಸ್ಯೆಯಾಗಿ ಕಂಡುಬರುತ್ತದೆ.

ಗ್ರಾಮ ಪಂಚಾಯಿತಿ ಮಹಿಳಾ ಸದಸ್ಯರಿಗೆ ಆರೋಗ್ಯದ ಸಮಸ್ಯೆ ಇರುತ್ತದೆ. ಅಂತಹವರು ಗ್ರಾಮ ಪಂಚಾಯಿತಿಯ ಕೆಲಸ-ಕಾರ್ಯಗಳ ಬಗ್ಗೆ ಸರಿಯಾದ ರೀತಿಯಲ್ಲಿ ತಿಳಿದುಕೊಳ್ಳಲು ಸಾಧ್ಯವಾಗುವುದಿಲ್ಲ. ಏನೋ ಬೇಕಾ-ಬಿಟ್ಟಿ ಪಂಚಾಯಿತಿಗಳಿಗೆ ಭಾಗವಹಿಸುತ್ತಾರೆ. ಇಂತಹವರು ಸಮಸ್ಯೆಗಳಿಗೆ ಹೆಚ್ಚು ಒಳಗಾಗುತ್ತಾರೆ.

ಗ್ರಾಮ ಪಂಚಾಯಿತಿಗಳಿಗೆ ಬೇರೆ-ಬೇರೆ ಹಳ್ಳಿಗಳಿಂದ ಬರುತ್ತಾರೆ. ಪಂಚಾಯಿತಿ ಇರುವ ಊರಿನಲ್ಲಿ ಇವರೆಲ್ಲರೂ ಒಂದು ಕಡೆ ಸೇರುತ್ತಾರೆ. ಆದರೆ ಮುಕ್ತವಾಗಿ ಮಾತನಾಡುವುದಿಲ್ಲ. ಪಂಚಾಯಿತಿಯ ಯಾವುದೇ ಕೆಲಸ ಕಾರ್ಯಗಳಲ್ಲಿ ಬೇರೆ ಕಡೆಯಿಂದ ಬರುವ ಮಹಿಳೆಯರು ಭಾಗಿಯಾಗುವುದರಲ್ಲಿ ಸೋಲುತ್ತಾರೆ. ಹಾಗಾಗಿ ಇದೊಂದು ಸಮಸ್ಯೆಯಾಗಿ ಕಂಡುಬರುತ್ತದೆ. ಗ್ರಾಮ ಪಂಚಾಯಿತಿಯಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ಚುನಾಯಿತ ಮಹಿಳೆ ಬೇರೆ ಸದಸ್ಯರೊಂದಿಗೆ ತುಂಬಾ ಹತ್ತಿರದಿಂದ ಬೆರೆಯುವಲ್ಲಿ ಸೋಲುತ್ತಾಳೆ. ಹಾಗಾಗಿ ಇದು ಕೂಡ ಸಮಸ್ಯೆಯಾಗಿ ಕಂಡುಬರುತ್ತದೆ. ಗ್ರಾಮ ಪಂಚಾಯಿತಿಯ ಚುನಾಯಿತ ಮಹಿಳಾ ಸದಸ್ಯರು ತಮ್ಮ ಜೊತೆಯಲ್ಲಿಯೇ

ಆಯ್ಕೆಯಾಗಿ ಬಂದಿರುವ ಪುರುಷ ಸದಸ್ಯರೊಟ್ಟಿಗೆ ಪ್ರೀತಿಯಿಂದ ಬೆರೆಯಲು ಸಾಧ್ಯವಾಗಿರುವುದಿಲ್ಲ. ಹಾಗಾಗಿ ಇದೊಂದು ಸಮಸ್ಯೆಯಾಗಿ ಕಾಣುತ್ತದೆ.

ಕೆಲವು ಚುನಾಯಿತ ಮಹಿಳೆಯರಿಗೆ ರಾಜ್ಯ ಸರ್ಕಾರದಿಂದ ಗ್ರಾಮ ಪಂಚಾಯಿತಿಯ ಮಹಿಳಾ ಸದಸ್ಯರಿಗೆ ನೀಡುವ ಗೌರವ ಧನ ಎಷ್ಟು? ಎಂಬುದು ಸಹ ಇವರಿಗೆ ತಿಳಿದಿರುವುದಿಲ್ಲ. ಪುರುಷ ಸದಸ್ಯರು ಮನೆಯ ಹತ್ತಿರ ಹೋಗಿ ಎಷ್ಟು ಹಣ ಕೊಡುತ್ತಾರೋ ಅಷ್ಟನ್ನು ತೆಗೆದುಕೊಳ್ಳುತ್ತಾರೆ. ಹಾಗೂ ಸಂಪೂರ್ಣ ಹಣ ಅವರ ಕೈಗೆ ಸೇರುವುದಿಲ್ಲ.

ಬಹುತೇಕ ಚುನಾಯಿತ ಮಹಿಳಾ ಸದಸ್ಯರುಗಳಿಗೆ ಗ್ರಾಮ ಪಂಚಾಯಿತಿಯಲ್ಲಿ ಗ್ರಾಮಸಭೆಯನ್ನು ಹೇಗೆ ನಡೆಸಬೇಕು ಎಂಬುದರ ಬಗ್ಗೆ ಪರಿಜ್ಞಾನವಿರುವುದಿಲ್ಲ. ಕೆಲಸ ಕಾರ್ಯಗಳ ಬಗ್ಗೆ ತಿಳಿದಿರುವುದಿಲ್ಲ. ಗ್ರಾಮ ಪಂಚಾಯಿತಿ ಸಭೆಗೆ ವಿಷಯಸೂಚಿಯನ್ನು ಕಳುಹಿಸಬೇಕಾದಾಗ ಯಾವ ರೀತಿಯ ನೀತಿ ನಿಯಮಗಳನ್ನು ಅನುಸರಿಸಬೇಕು ಮತ್ತು ಪಾಲಿಸಬೇಕು ಎಂಬುದು ಸಹ ತಿಳಿದಿರುವುದಿಲ್ಲ. ಗ್ರಾಮ ಪಂಚಾಯಿತಿಯ ನಿರ್ಣಯಗಳನ್ನು ಓದದೆ ಅಥವಾ ಇತರರಿಂದ ತಿಳಿಯದೆ ಸಭೆಯ ನಡಾವಳಿ ಪುಸ್ತಕಗಳಿಗೆ ಸಹಿ ಹಾಕುತ್ತಾರೆ. ಇದು ಒಂದು ರೀತಿಯ ಸಮಸ್ಯೆ ಎಂದು ಹೇಳಬಹುದಾಗಿದೆ.

ಮಹಿಳಾ ಸದಸ್ಯರು ಕೆಲವು ಸಂದರ್ಭಗಳಲ್ಲಿ ಗ್ರಾಮ ಸಭೆಯ ಚರ್ಚೆಯಲ್ಲಿ ಪಾಲ್ಗೊಳ್ಳುವಾಗ ಪುರುಷ ಸದಸ್ಯರು ಮಹಿಳಾ ಸದಸ್ಯರ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ಮಾಡಿಕೊಡದೆ ಮಹಿಳಾ ಸದಸ್ಯರ ಧ್ವನಿಯನ್ನು ದಮನ ಮಾಡುತ್ತಾರೆ. ಮಹಿಳಾ ಸದಸ್ಯರು ಗ್ರಾಮದಲ್ಲಿ ಅಭಿವೃದ್ಧಿ ಪರ ಚಟುವಟಿಕೆಗಳನ್ನು ಕೈಗೊಳ್ಳುವ ಸಂದರ್ಭದಲ್ಲಿ ಬಹಳಷ್ಟು ವೇಳೆ ನಿರೀಕ್ಷಿತ ರೀತಿಯಲ್ಲಿ ಸಮಸ್ಯೆಗಳನ್ನು ಪರಿಹರಿಸಲು ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಸಹಕರಿಸುತ್ತಿಲ್ಲ. ಮತ್ತು ಮಹಿಳಾ ಸದಸ್ಯರು ಎಂಬ ಕಾರಣಕ್ಕಾಗಿಯೇ ಪಂಚಾಯಿತಿಯಲ್ಲಿ ತಾರತಮ್ಯ ಮಾಡಲಾಗುತ್ತಿದೆ. ಹಾಗೂ ಕೆಲಸದಲ್ಲಿ ವಿಳಂಬ ಮಾಡಲಾಗುತ್ತಿದೆ. ಹಾಗಾಗಿ ಇದು ಕೂಡ ಒಂದು ಸಮಸ್ಯೆಯಾಗಿದೆ. ಮಹಿಳಾ ಸದಸ್ಯರು ಸಂವಹನದ ಕೊರತೆಯಿಂದ ಗ್ರಾಮನಿವಾಸಿಗಳ ಸಮಸ್ಯೆಗಳನ್ನು ಅರ್ಥೈಸಿಕೊಳ್ಳುವಲ್ಲಿ ವಿಫಲವಾಗಿರುವುದನ್ನು ಕಾಣಬಹುದಾಗಿದೆ. ಆದ್ದರಿಂದ ಇದೊಂದು ಸಮಸ್ಯೆಯಾಗಿ ಕಂಡುಬಂದಿದೆ.

ಮಹಿಳಾ ಸದಸ್ಯರು ಎಷ್ಟೇ ವಿದ್ಯಾವಂತರಾಗಿದ್ದರು, ಧೈರ್ಯವಂತರಾಗಿದ್ದರು ಮತ್ತು ಬುದ್ಧಿವಂತರಾಗಿದ್ದರು ಪಂಚಾಯತಿಯ ಸಭೆಗಳಲ್ಲಿ ಸ್ವ ಇಚ್ಛೆಯಿಂದ ನಿರ್ಧಾರ ಕೈಗೊಂಡು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವಂತಹ ಅಧಿಕಾರ ನೀಡಿರುವುದಿಲ್ಲ. ಸಭೆಗಳಲ್ಲಿ ಪುರುಷ ಸದಸ್ಯರು ಹಾಗೂ ಅಧಿಕಾರಿಗಳ ಜೊತೆ ಚರ್ಚಿಸುವುದಕ್ಕಾಗಲಿ,

ಫಲಾನುಭವಿಗಳನ್ನು ಆಯ್ಕೆ ಮಾಡುವುದಕ್ಕಾಗಲಿ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಗ್ರಾಮದಲ್ಲಿ ಕೈಗೊಳ್ಳುವುದಕ್ಕಾಗಲಿ ಯಾವುದೇ ರೀತಿಯ ಸ್ವಾತಂತ್ರ್ಯವನ್ನು ನೀಡಿರುವುದಿಲ್ಲ. ಆದ್ದರಿಂದ ಇದು ಕೂಡ ಸಮಸ್ಯೆಯಾಗಿ ಕಂಡುಬಂದಿದೆ. ಮಹಿಳಾ ಸದಸ್ಯರ ಅಧಿಕಾರದಲ್ಲಿ ಆ ಕ್ಷೇತ್ರದ ಶಾಸನಸಭಾ ಸದಸ್ಯರು ಹಸ್ತಕ್ಷೇಪವನ್ನು ಮಾಡುತ್ತಾರೆ. ಹಾಗಾಗಿ ಇದು ಸಮಸ್ಯೆಯಾಗಿ ಕಾಣುತ್ತದೆ.

ಮೀಸಲಾತಿಯ ಮೂಲಕ ಪಂಚಾಯಿತಿಗೆ ಚುನಾಯಿತರಾಗಿರುವ ಮಹಿಳೆಯರಿಗೆ ಆಡಳಿತದಲ್ಲಿ ಅನುಭವದ ಕೊರತೆ, ಸಭೆಗಳಲ್ಲಿ ಮಾತನಾಡುವುದಕ್ಕೆ ಭಯ ಮತ್ತು ಸಂಕೋಚ ಪಡುವ ಸಂದರ್ಭದಲ್ಲಿ ಜೊತೆಗಿರುವ ಪುರುಷ ಸದಸ್ಯರು ಅವಳಿಗೆ ಮಾರ್ಗದರ್ಶನವನ್ನು ನೀಡಿ ಪ್ರೋತ್ಸಾಹಿಸುವುದಿಲ್ಲ. ಹಾಗೂ ಸಭೆಗಳಲ್ಲಿ ಮಹಿಳಾ ಸದಸ್ಯರ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶವನ್ನು ಕೊಡದೇ ಅವರ ಧ್ವನಿಯನ್ನು ದಮನ ಮಾಡುತ್ತಾರೆ. ಹಾಗೂ ಗ್ರಾಮ ಪಂಚಾಯಿತಿಯ ಕಾಮಗಾರಿ ಮತ್ತು ಅಭಿವೃದ್ಧಿ ವಿಷಯಗಳಿಗೆ ಸಂಬಂಧಿಸಿದಂತೆ ಮಹಿಳಾ ಸದಸ್ಯರ ಬಗ್ಗೆ ಪುರುಷ ಸದಸ್ಯರು ಕೀಳರಿಮೆ ಭಾವನೆಯನ್ನು ಹೊಂದಿರುತ್ತಾರೆ. ಇದರಿಂದ ಸಕಾಲಕ್ಕೆ ಗ್ರಾಮದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯವಾಗದೆ ಸಾರ್ವಜನಿಕರ ನಿಂದನೆಗೆ ಒಳಗಾಗುತ್ತಿದ್ದಾರೆ. ಮಹಿಳಾ ಸದಸ್ಯರು ಏನೇ ಕೇಳಿದರೂ ಸ್ಪಂದಿಸದೇ ಅಸಹಕಾರ ನೀಡುತ್ತಿರುವುದು ಮುಖ್ಯ ಸಮಸ್ಯೆಯಾಗಿ ಕಂಡುಬರುತ್ತದೆ.

ರಾಜಕೀಯ ಪಕ್ಷಗಳು ಗ್ರಾಮ ಪಂಚಾಯಿತಿಗಳಲ್ಲಿ ಕೆಲಸ ಮಾಡುತ್ತವೆ. ಆ ಪಕ್ಷದ ಸದಸ್ಯರನ್ನು ಕಂಡರೆ ಈ ಪಕ್ಷದ ಸದಸ್ಯರಿಗೆ ಆಗುವುದಿಲ್ಲ. ಅವರಲ್ಲಿಯೇ ತಾವು ಮೇಲು ಜಾತಿ ನೀವು ಕೀಳು ಜಾತಿ ಎಂಬ ಭಾವನೆಯನ್ನು ಗ್ರಾಮದ ಜನರಲ್ಲಿ ಮೂಡಿಸುವಂತಹ ವಾತಾವರಣವನ್ನು ಸೃಷ್ಟಿ ಮಾಡುತ್ತಾರೆ. ಕೆಳ ಜಾತಿಯ ಸದಸ್ಯರು ಗ್ರಾಮದ ಜನರಿಗೆ ಕೆಲಸ ಮಾಡಿಸಲು ಮುಂದಾದರೆ ಗ್ರಾಮದ ಜನರು ಅವರನ್ನು ನಂಬುವುದಿಲ್ಲ. ಬದಲು ಮೇಲು ಜಾತಿಯ ಸದಸ್ಯರನ್ನು ನಂಬಿ ಅವರ ಮನೆಯ ಹತ್ತಿರ ಹೋಗಿ ಕೆಲಸ ಮಾಡಿಸಿಕೊಳ್ಳಲು ಮುಂದಾಗುತ್ತಾರೆ. ಇದು ಒಂದು ರೀತಿಯ ಸಮಸ್ಯೆಯಾಗಿದೆ.

ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರು ಗ್ರಾಮ ಪಂಚಾಯತಿಗಳಲ್ಲಿ ಪಕ್ಷಾತೀತವಾಗಿ ಕೆಲಸ ಮಾಡಬೇಕು ಆದರೆ ಇವರು ಮಾಡುವುದಿಲ್ಲ. ಮಹಿಳಾ ಸದಸ್ಯರಿಗೆ ಪಂಚಾಯಿತಿಯಿಂದ ಕೊಟ್ಟಿರುವಂತಹ ಕೆಲಸಗಳನ್ನು ಮಾಡಿಸಲು ಬಹಳ ದಿನ ತೆಗೆದುಕೊಳ್ಳುತ್ತಾರೆ. ಆದರೆ ಪ್ರಬಲವಾಗಿರುವ ಸದಸ್ಯರು ಕೊಟ್ಟಂತಹ ಕೆಲಸಗಳನ್ನು ಬಹಳ ಬೇಗ ಮಾಡಿಕೊಡುತ್ತಾರೆ. ಇದು ಒಂದು ರೀತಿಯಲ್ಲಿ ತಾರತಮ್ಯದ ಸಮಸ್ಯೆಯಾಗಿರುತ್ತದೆ.

ಗ್ರಾಮ ಪಂಚಾಯಿತಿಯ ಸಭೆಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಕೆಲವೊಂದು ಬಾರಿ ಮಾತ್ರ ನಮ್ಮ ಅನಿಸಿಕೆಯನ್ನು ಕೇಳುತ್ತಾರೆ. ಮಿಕ್ಕ ಸಂದರ್ಭಗಳಲ್ಲಿ ಅವರೇ ನಿರ್ಣಯ ತೆಗೆದುಕೊಳ್ಳುತ್ತಾರೆ. ಇದು ಕೂಡ ಸಮಸ್ಯೆಯಾಗಿ ಕಂಡುಬಂದಿದೆ. ಮಹಿಳಾ ಸದಸ್ಯರು ನರೇಗಾ ಯೋಜನೆಯಡಿಯಲ್ಲಿ ಗ್ರಾಮದಲ್ಲಿ ಕೆಲಸ ಮಾಡಿಸಲು ಕಷ್ಟವಾಗುತ್ತಿದೆ. ಈ ಯೋಜನೆಯಲ್ಲಿ ನೇರವಾಗಿ ಹಣ ಕೈ ಸೇರುವುದಿಲ್ಲ. ಬದಲಾಗಿ ಫಲಾನುಭವಿಯ ಖಾತೆಗೆ ನೇರವಾಗಿ ಹಣ ಜಮೆ ಆಗುತ್ತದೆ. ನೇರವಾಗಿ ಹಣ ತಲುಪಿದರೆ ಗ್ರಾಮದಲ್ಲಿ ಬಹಳ ಬೇಗ ಕೆಲಸ ಆಗುತ್ತದೆ. ಇಲ್ಲದಿದ್ದರೆ ಕೆಲಸಕ್ಕಾಗಿ ಕೂಲಿ ಆಳುಗಳನ್ನು ಮೊದಲು ನೇಮಿಸಿಕೊಂಡು ಅವರಿಗೆ ಸಂಬಳ ಕೊಟ್ಟು ಕೆಲಸ ಮಾಡಿಸುವಷ್ಟು ಸಾಮರ್ಥ್ಯ ಕೆಲವು ಚುನಾಯಿತ ಮಹಿಳೆಯರಿಗಿರುವುದಿಲ್ಲ. ಹಾಗಾಗಿ ಇದೊಂದು ಸಮಸ್ಯೆಯಾಗಿ ಕಂಡುಬರುತ್ತದೆ.

**ಸ್ಥಳೀಯ ಸ್ವಯಂ-ಸರ್ಕಾರಗಳಲ್ಲಿ ಚುನಾಯಿತ ಮಹಿಳೆಯರು ಎದುರಿಸುತ್ತಿರುವ ಸವಾಲುಗಳು:**

ಪಂಚಾಯತ್ ರಾಜ್ ವ್ಯವಸ್ಥೆಯೊಳಗೆ ಮಹಿಳಾ ಮೀಸಲಾತಿ ಬಂದ ಕಾರಣಕ್ಕಾಗಿಯೇ ಎಷ್ಟೋ ಮಹಿಳೆಯರು ಪಂಚಾಯಿತಿಯ ಮೆಟ್ಟಿಲು ಏರಲು ಸಾಧ್ಯವಾಯಿತು. ಮುಗ್ಧ ಮನಸ್ಸಿನ ಮಹಿಳೆಯರು ಪಿತೃಪ್ರಧಾನ ವ್ಯವಸ್ಥೆಯೊಳಗೆ ಮನೆಯಲ್ಲಿ ಗೃಹಿಣಿಯಾಗಿ ಇರುತ್ತಿದ್ದರು. ಕುಟುಂಬದಲ್ಲಿ ಮಕ್ಕಳ ಲಾಲನೆ, ಪಾಲನೆ, ಪೋಷಕರ ಸೇವೆ, ವೃದ್ಧರ ಸೇವೆ ಮಾಡಿಕೊಂಡು ಗಂಡನ ಹಿಡಿತದಲ್ಲಿ ಜೀವಿಸುತ್ತಿದ್ದರು. ಆದರೆ ಮೀಸಲಾತಿಯ ಪ್ರಭಾವದಿಂದ ಪಂಚಾಯಿತಿಯ ಚುನಾವಣೆಗೆ ನಿಂತು ಗೆದ್ದು ಅಧಿಕಾರ ಪಡೆದು ಪಂಚಾಯಿತಿ ಪ್ರವೇಶ ಮಾಡಿದ್ದಾರೆ.

ಈ ಪ್ರವೇಶ ಮಾಡಿದ ಮಹಿಳೆಯರಲ್ಲಿ ಒಂದೇ ರೀತಿಯಲ್ಲಿ ಯಾರು ಇಲ್ಲ? ಅವರ ಕುಟುಂಬದ ಹಿನ್ನೆಲೆ, ಜಾತಿ ಹಿನ್ನೆಲೆ, ಆರ್ಥಿಕ ಹಿನ್ನೆಲೆ, ಸಾಮಾಜಿಕ ಹಿನ್ನೆಲೆ, ಬೇರೆ ಬೇರೆ ರೀತಿ ಇವೆ. ಇವರ ಶಿಕ್ಷಣದಲ್ಲಿಯೂ ಸಾಕಷ್ಟು ಏರು-ಪೇರುಗಳಿವೆ. ಒಬ್ಬೊಬ್ಬ ಮಹಿಳೆಯರು ಒಂದು ತರಹ ಇದ್ದಾರೆ. ಇಂತಹ ಹಿನ್ನೆಲೆಯಿಂದ ಬಂದ ಮಹಿಳೆಯರು ದಿಢೀರನೇ ಪಂಚಾಯಿತಿಯ ಸದಸ್ಯರು, ಅಧ್ಯಕ್ಷರು ಮತ್ತು ಉಪಾಧ್ಯಕ್ಷರಾದ ಮೇಲೆ ಅನೇಕ ಸವಾಲುಗಳನ್ನು ಎದುರಿಸಿದ್ದಾರೆ.

ಪಂಚಾಯಿತಿಯ ಮಹಿಳಾ ಸದಸ್ಯರನ್ನು ಮುಕ್ತವಾಗಿ ಸಂದರ್ಶನ ಮಾಡಿದಾಗ, ಅವರ ಜೊತೆ ಅವರ ಅಧಿಕಾರ ಮತ್ತು ಆಡಳಿತದ ಬಗ್ಗೆ ಚರ್ಚೆ ಮಾಡಿದಾಗ ಹಾಗೂ ಅವರ ಕುಟುಂಬಗಳ ಹಿನ್ನೆಲೆ ಮತ್ತು ಸ್ಥಿತಿಗತಿಗಳ ಹಿನ್ನೆಲೆಯಲ್ಲಿ ಯೋಚನೆ ಮಾಡಿದಾಗ ಮತ್ತು ಅವರ ಶಿಕ್ಷಣ, ಸಾಮರ್ಥ್ಯ, ತಾಳ್ಮೆ, ಧೈರ್ಯ ಎಲ್ಲವನ್ನು ಗಮನಿಸಿದಾಗ ಇಲ್ಲಿ ಅನೇಕ ಸವಾಲುಗಳು ಕಂಡುಬರುತ್ತವೆ. ಅವುಗಳನ್ನು ಈ

ಕೆಳಕಂಡಂತೆ ನೋಡಬಹುದಾಗಿದೆ.

ಪಂಚಾಯಿತಿಯ ಸದಸ್ಯಳಾಗಿ ಮಹಿಳೆ ಅಧಿಕಾರ ನಡೆಸುವುದೇ ಒಂದು ದೊಡ್ಡ ಸವಾಲು. ಏಕೆಂದರೆ ಅವಳು ಇಲ್ಲಿಗೆ ಬರುವುದಕ್ಕಿಂತ ಮುಂಚೆ ಒಬ್ಬ ಗೃಹಿಣಿಯಾಗಿ ಅಥವಾ ಕುಟುಂಬ ಸದಸ್ಯಳಾಗಿ ಕುಟುಂಬಕ್ಕೆ ಸೀಮಿತವಾಗಿ ಇರುತ್ತಿದ್ದಳು. ಆದರೆ ಪಂಚಾಯಿತಿ ಪ್ರವೇಶ ಮಾಡಿದ ಮೇಲೆ ಅವಳ ಕ್ಷೇತ್ರ ದೊಡ್ಡದಾಯಿತು. ಇಡೀ ಊರಿನ ವಿಚಾರಗಳ ಕಡೆ ಗಮನಹರಿಸಬೇಕು. ಬೇರೆ-ಬೇರೆ ಪುರುಷ ಮತ್ತು ಮಹಿಳಾ ಸದಸ್ಯರ ಜೊತೆ ಬೆರೆಯಬೇಕು. ಅಲ್ಲಿನ ಸರ್ಕಾರಿ ಅಧಿಕಾರಿಗಳ ಜೊತೆ ವಿಚಾರಗಳ ಕುರಿತು ಚರ್ಚಿಸಬೇಕು. ಅದು ಅವಳಿಗೆ ವೈಯಕ್ತಿಕವಾಗಿ ದೊಡ್ಡ ಸವಾಲಾಯಿತು. ಹತ್ತಾರು-ಜನರೊಂದಿಗೆ ಮಾತನಾಡಿ ಅವರ ಸಮಸ್ಯೆಗಳಿಗೆ ಸ್ಪಂದಿಸುವುದೇ ಒಂದು ದೊಡ್ಡ ಸವಾಲಿನ ವಿಷಯವಾಗಿದೆ. ಚುನಾಯಿತ ಮಹಿಳೆ ತನ್ನ ದೇಹ-ಮನಸ್ಸು ಮತ್ತು ಆಲೋಚನಾ ವಿಧಾನಗಳನ್ನು ಸಾರ್ವಜನಿಕವಾಗಿ ತೊಡಗಿಸಿಕೊಳ್ಳುವಲ್ಲಿ ಅವಳಲ್ಲಿಯೇ ಒಂದು ದೊಡ್ಡ ಸವಾಲು ಉಂಟಾಗುತ್ತದೆ. ಮುಂದೆ ಅವಳು ಸ್ವ ಇಚ್ಛೆಯಿಂದ ಸಮಾಜಮುಖಿಯಾಗಿ ಕಾರ್ಯ ನಿರ್ವಹಿಸಬೇಕಾದರೆ ಅನೇಕ ಸವಾಲುಗಳನ್ನು ದಾಟಿ ಬರಬೇಕಾದ ಅನಿವಾರ್ಯತೆ ಅವಳಿಗಿದೆ. ಹೀಗಾಗಿ ಮಹಿಳಾ ಸದಸ್ಯಳಾಗಿ ಮುಕ್ತವಾಗಿ ಎಲ್ಲರೊಂದಿಗೆ ಮಾತನಾಡುವುದೆ ಒಂದು ಸವಾಲಿನ ವಿಷಯವಾಗಿದೆ.

ಕೆಲವು ಚುನಾಯಿತ ಮಹಿಳೆಯರು ಅನಕ್ಷರಸ್ಥರಾಗಿರುತ್ತಾರೆ. ಅಂತಹ ಮಹಿಳೆಯರಿಗೆ ಗ್ರಾಮ ಪಂಚಾಯಿತಿಯ ಪರಿಕಲ್ಪನೆಯೇ ಒಂದು ದೊಡ್ಡ ಸವಾಲಿನ ಮೂಲಕ ಪ್ರವೇಶವಾಗುತ್ತದೆ. ಈ ಮಹಿಳೆ ಅನಕ್ಷರಸ್ಥಳೆನ್ನುವ ಕಾರಣಕ್ಕಾಗಿಯೇ ಅನೇಕ ಪುರುಷ ಸದಸ್ಯರು ಮತ್ತು ಮಹಿಳಾ ಸದಸ್ಯರು ಹಾಗೂ ಕುಟುಂಬದ ಸದಸ್ಯರು ಅವಳಿಗೆ ಪ್ರತಿಯೊಂದು ಹಂತದಲ್ಲಿಯೂ ಮಾರ್ಗದರ್ಶನ ನೀಡುತ್ತಾರೆ. ಅದನ್ನ ಅವಳು ಒಂದು ಸವಾಲಿನ ಮೂಲಕ ತೆಗೆದುಕೊಂಡು ತಾನು ಅಂದುಕೊಂಡಿರುವುದಕ್ಕಿಂತ ಜಾಸ್ತಿ ತಿಳಿದುಕೊಳ್ಳುವ ಪ್ರಯತ್ನ ಮಾಡುತ್ತಾಳೆ.

ತಿಳಿದುಕೊಳ್ಳುವುದಕ್ಕೆ, ಅರ್ಥ ಮಾಡಿಕೊಳ್ಳುವುದಕ್ಕೆ, ಆಲೋಚನೆ ಮಾಡುವುದಕ್ಕೆ ಶಿಕ್ಷಣವೇ ಬೇಕಿಲ್ಲ. ಏಕೆಂದರೆ ಎಷ್ಟೋ ಜನ ಅನಕ್ಷರಸ್ಥ ಮಹಿಳೆಯರು ತುಂಬಾ ಬುದ್ಧಿವಂತರಿರುತ್ತಾರೆ. ಹಾಗೂ ಜವಾಬ್ಧಾರಿ ಹೊಂದಿರುತ್ತಾರೆ. ಅಂತಹವರು ಕುಟುಂಬದಲ್ಲಿ ಹೇಗೆ ಜವಾಬ್ಧಾರಿ ತೆಗೆದುಕೊಳ್ಳುತ್ತಾರೋ ಹಾಗೆಯೇ ಪಂಚಾಯಿತಿಯಲ್ಲಿ ತೆಗೆದುಕೊಂಡರೆ ಏನು ಸಮಸ್ಯೆಯಾಗುವುದಿಲ್ಲ. ಆದರೆ ಇಂತಹ ಕೆಲಸವನ್ನು ಕೆಲವು ಅನಕ್ಷರಸ್ಥ ಪಂಚಾಯಿತಿಯ ಸದಸ್ಯ ಮಹಿಳೆಯರು ಮಾಡಿದ್ದಾರೆ. ತಮ್ಮ ಮುಂದೆ ತಾವೇ ಒಂದು ದೊಡ್ಡ ಸವಾಲನ್ನು ಹಾಕಿಕೊಂಡು ತನ್ನ ಕುಟುಂಬದ ರೀತಿ

ಪಂಚಾಯಿತಿಯನ್ನ ನಡೆಸಿಕೊಂಡು ಹೋಗುವ ಕೆಲಸವನ್ನು ಮಾಡಿದ್ದಾರೆ.

ವಾಸ್ತವವಾಗಿ ಪಂಚಾಯಿತಿಯ ಮಹಿಳಾ ಸದಸ್ಯರು ಸ್ವತಂತ್ರ ಮತ್ತು ಸಮಾನತೆಯನ್ನು ಸವಾಲಾಗಿ ತೆಗೆದುಕೊಳ್ಳುತ್ತಾರೆ. ಏಕೆಂದರೆ, ಮಹಿಳೆ ಎನ್ನುವ ಕಾರಣಕ್ಕಾಗಿ ಕೆಲವು ಸಂದರ್ಭಗಳಲ್ಲಿ ಅವುಗಳಿಂದ ದೂರ ಉಳಿಯುತ್ತಿದ್ದಳು. ಮೇಲಾಗಿ ಅನಕ್ಷರಸ್ಥ ಮಹಿಳೆಯರು ಹಾಗೂ ಕೆಳ ಜಾತಿ ಮಹಿಳೆಯರು ಸ್ವತಂತ್ರ ಮತ್ತು ಸಮಾನತೆಯ ವಿಷಯಗಳಲ್ಲಿ ಅನೇಕ ಬಾರಿ ಗೊಂದಲಕ್ಕೊಳಗಾಗಿರುತ್ತಾರೆ. ಆದರೆ ಚುನಾಯಿತ ಮಹಿಳಾ ಸದಸ್ಯರಿಗೆ ಸ್ವಲ್ಪ ಜವಾಬ್ದಾರಿ ಬಂದ ಮೇಲೆ ಸ್ವತಂತ್ರ ಮತ್ತು ಸಮಾನತೆಯನ್ನು ಒಂದು ದೊಡ್ಡ ಸವಾಲಿನ ಮೂಲಕ ತೆಗೆದುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಇವೆರಡನ್ನು ಸವಾಲಾಗಿ ತೆಗೆದುಕೊಂಡು ಆಡಳಿತದಲ್ಲಿ ಭಾಗಿಯಾಗಿ ಪುರುಷನ ಸರಿಸಮಾನವಾಗಿ ಆಡಳಿತ ನಡೆಸುವುದನ್ನು ಇಂದು ನಾವು ಕಾಣುತ್ತಿದ್ದೇವೆ.

ಗ್ರಾಮ ಪಂಚಾಯಿತಿಯ ಸದಸ್ಯಳಾಗಿ ಕಾಮಗಾರಿ ಮತ್ತು ಯೋಜನೆಗಳ ಕಡೆ ಗಮನಹರಿಸುವಾಗ ಸವಾಲುಗಳನ್ನ ಎದುರಿಗಿಟ್ಟುಕೊಂಡೆ ಯೋಚಿಸಿರುತ್ತಾಳೆ. ಮೂಲತಃ ಮಹಿಳಾ ಸದಸ್ಯರಾದವರಿಗೆ ಗ್ರಾಮ ಪಂಚಾಯಿತಿಯೊಳಗಡೆ ಏನು ಕಾಮಗಾರಿಗಳು ನಡೆಯುತ್ತಿವೆ. ಹಾಗೂ ಮೂಲಭೂತ ಸೌಕರ್ಯಗಳ ಬಗ್ಗೆ ತಿಳಿದುಕೊಳ್ಳುವಾಗ ಇನ್ನೊಬ್ಬರ ಪ್ರೋತ್ಸಾಹ ತೆಗೆದುಕೊಳ್ಳಬೇಕಾಗುತ್ತದೆ. ಜೊತೆಗೆ ಗ್ರಾಮೀಣಾಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿಗಳು ಈ ತರಹದ ಎಷ್ಟೋ ಜನ ಸದಸ್ಯರನ್ನು ಅವರು ನೋಡಿರುತ್ತಾರೆ. ಸರ್ಕಾರದ ಪರವಾಗಿ ಕೆಲಸ ಮಾಡುವ ಅಧಿಕಾರಿಗಳು ಅವರ ಸೇವೆಯ ಅವಧಿಯಲ್ಲಿ ಅನೇಕ ಗ್ರಾಮ ಪಂಚಾಯಿತಿಗಳನ್ನು ನೋಡಿರುತ್ತಾರೆ. ಹಾಗೆಯೇ ಪುರುಷ ಮತ್ತು ಮಹಿಳಾ ಗ್ರಾಮ ಪಂಚಾಯಿತಿಯ ಸದಸ್ಯರುಗಳು ಇವರ ಒಡನಾಟದಲ್ಲಿ ಅನೇಕ ಜನ ಬಂದು ಹೋಗಿರುತ್ತಾರೆ. ಹಾಗಾಗಿ ಚುನಾಯಿತ ಮಹಿಳಾ ಸದಸ್ಯರು ಹೊಸದಾಗಿ ಆಯ್ಕೆಯಾಗಿ ಬಂದಾಗ ಅವರಿಗೆ ಗ್ರಾಮ ಪಂಚಾಯಿತಿಯಲ್ಲಿ ಅನೇಕ ಸವಾಲುಗಳು ಎದುರಾಗುತ್ತವೆ. ಆ ಸಂದರ್ಭದಲ್ಲಿ ಅವರು ಏನಾದರೂ ಯೋಜನೆಗಳ ಬಗ್ಗೆ ಕೇಳಿದರೆ ಅಧಿಕಾರಿಗಳು ಹಾರಿಕೆಯ ಉತ್ತರ ಕೊಡುತ್ತಾರೆ. ಅದನ್ನ ಅರ್ಥ ಮಾಡಿಕೊಂಡ ಚುನಾಯಿತ ಮಹಿಳೆಯರಿಗೆ ನೇರವಾಗಿ ಎಲ್ಲಾ ಯೋಜನೆ, ಅನುದಾನ, ಕಾರ್ಯಕ್ರಮಗಳ ಬಗ್ಗೆ ತಿಳಿದುಕೊಳ್ಳುವಾಗ ದೊಡ್ಡ ಸವಾಲೇ ಮುಂದೆ ನಿಲ್ಲುತ್ತದೆ. ಇಂತಹ ಸನ್ನಿವೇಶ ಮತ್ತು ಸಂದರ್ಭಗಳನ್ನು ಸೂಕ್ಷ್ಮವಾಗಿ ಅರ್ಥಮಾಡಿಕೊಂಡ ನಂತರ ಅವರಿಗೆ ಅಧಿಕಾರ ಹಿಡಿತಕ್ಕೆ ಸಿಗುತ್ತದೆ. ಈ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯಿತಿ ಚುನಾಯಿತ ಮಹಿಳೆಯರು ಸವಾಲಿನ ಮುಖಾಂತರವೇ ಅಧಿಕಾರದೊಳಗೆ ಹೊಕ್ಕಿ ಅಲ್ಲಿನ ಸಾಧಕ-ಬಾಧಕಗಳನ್ನು ತಿಳಿದುಕೊಂಡು ತನ್ನದೇ ಆದ ರೀತಿಯಲ್ಲಿ ಕೆಲಸ ಮಾಡಲು ಸಾಧ್ಯವಾಗುತ್ತದೆ.

ಆದ್ದರಿಂದ ಇಲ್ಲಿನ ಮಹಿಳೆಯರು ಸವಾಲುಗಳನ್ನು ಸಕಾರಾತ್ಮಕವಾಗಿ ತನ್ನ ವೈಯಕ್ತಿಕ ಅಭಿವೃದ್ಧಿಯ ಪೂರಕವಾಗಿ ಬಳಸಿಕೊಂಡಾಗ ಮಾತ್ರ ಆ ಮಹಿಳೆ ಸಬಲೀಕರಣಗೊಳ್ಳಲು ಸಾಧ್ಯವಾಗುತ್ತದೆ. ಇಲ್ಲಿನ ಕೆಲವು ಗ್ರಾಮ ಪಂಚಾಯಿತಿ ಮಹಿಳಾ ಸದಸ್ಯರು ತಮ್ಮ ಪಂಚಾಯಿತಿಗಳಲ್ಲಿನ ಕೆಲಸ ಕಾರ್ಯಗಳನ್ನು ಸವಾಲಿನ ಮೂಲಕ ಸ್ವೀಕರಿಸಿಕೊಂಡು ತದನಂತರ ಅವುಗಳನ್ನು ಜಾಣ್ಮೆಯಿಂದ ಸುಲಭ ಮಾರ್ಗದಲ್ಲಿ ಅನುಷ್ಠಾನಗೊಳಿಸಿರುವುದನ್ನು ಇಲ್ಲಿ ನೋಡಬಹುದಾಗಿದೆ.

ಗ್ರಾಮ ಪಂಚಾಯಿತಿಯ ಚುನಾಯಿತ ಮಹಿಳಾ ಸದಸ್ಯರು ಇಂದಿಗೂ ಪಿತೃಪ್ರಧಾನ ವ್ಯವಸ್ಥೆಯೊಳಗೆ ಜೀವಿಸುತ್ತಿದ್ದಾಳೆ. ಈ ಮಹಿಳೆ ರಾಜಕೀಯ ಪ್ರವೇಶ ಮಾಡಲು ಮಹಿಳಾ ಮೀಸಲಾತಿ ಒಂದು ಕಡೆ ಕಾರಣವಾದರೆ ಇನ್ನೊಂದು ಕಡೆ ಕುಟುಂಬದಲ್ಲಿನ ಗಂಡನೋ, ತಂದೆಯೋ, ಮಾವನೋ, ಅಣ್ಣ-ತಮ್ಮಂದಿರೋ ಕಾರಣರಾಗಿರುತ್ತಾರೆ. ಆದರೆ ಇಲ್ಲಿ ಚುನಾಯಿತ ಮಹಿಳಾ ಸದಸ್ಯರೂ ತನ್ನ ಕುಟುಂಬದಲ್ಲಿನ ಪುರುಷ ಸದಸ್ಯರನ್ನು ಅಧಿಕಾರದಲ್ಲಿ ಬಳಸಿಕೊಳ್ಳುತ್ತಾರೆ ಎಂಬ ಆರೋಪವಿದೆ. ಆದರೆ ಮಹಿಳೆ ಆರೋಪದಿಂದ ಮುಕ್ತರಾಗಲು ಅದನ್ನ ಸವಾಲಿನ ರೀತಿಯಲ್ಲಿ ತೆಗೆದುಕೊಳ್ಳುತ್ತಾಳೆ. ಇಲ್ಲಿನ ಚುನಾಯಿತ ಮಹಿಳಾ ಸದಸ್ಯರಲ್ಲಿ ಕೆಲವು ಮಹಿಳೆಯರು ತಮ್ಮ ಕುಟುಂಬ ಸದಸ್ಯರನ್ನು ಗ್ರಾಮ ಪಂಚಾಯಿತಿಯಿಂದ ದೂರವಿಟ್ಟು ಅಧಿಕಾರ ನಡೆಸಿರುವುದನ್ನು ಕಾಣುತ್ತೇವೆ. ಅಂದರೆ ಇಲ್ಲಿ ಆ ಮಹಿಳೆ ಈ ಅಪವಾದವನ್ನು ಸವಾಲಾಗಿ ತೆಗೆದುಕೊಳ್ಳುತ್ತಾಳೆ. ಪಂಚಾಯಿತಿಯಲ್ಲಿ ಏನೇ ಸಮಸ್ಯೆ ಬಂದರೂ ಅದನ್ನು ನಾನು ನಿಭಾಯಿಸಲೇಬೇಕು ಎಂದು ಧೈರ್ಯ ತೆಗೆದುಕೊಂಡು ನಡೆಸಿರುವ ಮಹಿಳೆಯರು ಇದ್ದಾರೆ. ಇನ್ನು ಕೆಲವು ಕಡೆ ಅನಕ್ಷರಸ್ಥ ಮಹಿಳೆಯರಲ್ಲಿ ಕೆಲವರು ತುಂಬಾ ಅನಿವಾರ್ಯ ಸಂದರ್ಭದಲ್ಲಿ ತಮ್ಮ ಕುಟುಂಬದ ಸದಸ್ಯರನ್ನು ಗೊತ್ತಿದ್ದು ಗೊತ್ತಿಲ್ಲದ ರೀತಿಯಲ್ಲಿ ಬಳಸಿಕೊಂಡಿರುವುದು ಕಂಡುಬರುತ್ತದೆ. ಇವರಿಗೆ ಸವಾಲುಗಳು ಇಲ್ಲವೆಂದಲ್ಲ. ಆದರೆ ಇವರ ಆಲೋಚನಾ ಕ್ರಮದಲ್ಲಿ ಕುಟುಂಬದ ಸದಸ್ಯರ ಮೇಲೆ ಅವಲಂಬಿತವಾಗಲೇಬೇಕು ಎನ್ನುವ ಒತ್ತಡ ಇರುವುದರಿಂದ ಬಳಸಿಕೊಂಡಿರುತ್ತಾರೆ.

**ಪರಾಮರ್ಶನ ಗ್ರಂಥಗಳು:**


1. ಗಾಯಿತ್ರಿ ಎನ್., (೨೦೧೨), ಮಹಿಳಾ ಮೀಸಲಾತಿ ಮತ್ತು ಲಿಂಗ ರಾಜಕಾರಣ, ಲಡಾಯಿ ಪ್ರಕಾಶನ, ಗದಗ.
2. ಈಶ್ವರಚಂದ್ರ, (೨೦೧೦), ಭಾರತದಲ್ಲಿ ಪಂಚಾಯತಿ ರಾಜ್, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ಹೊಸದೆಹಲಿ.
3. ಒಡೆಯರ್ ಡಿ. ಹೆಗ್ಗಡೆ, (೨೦೦೭), ಭಾರತದಲ್ಲಿ ಮಹಿಳಾ ರಾಜಕೀಯ ಪ್ರತಿನಿಧ್ಯ, ಅರ್ಜುನ್ ಪಬ್ಲಿಷಿಂಗ್ ಹೌಸ್, ಮೈಸೂರು.
4. ಚಂದ್ರಶೇಖರ್ ಕೆ., (೨೦೦೯), ಅಭಿವೃದ್ಧಿ ಪಥದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು, ಅಹನ ಪ್ರಕಾಶನ, ಬೆಂಗಳೂರು.
5. ಮೀನಾಕ್ಷಿ ಡಿ., (೨೦೧೦), ನಿರ್ಣಯ ಪ್ರಕ್ರಿಯೆಯಲ್ಲಿ ಚುನಾಯಿತ ಮಹಿಳೆಯರ ಪಾತ್ರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
6. ಲೋಹಿತಾಶ್ವ ಹೆಚ್.ಸಿ., (೧೯೯೮), ಪಂಚಾಯತ್ ರಾಜ್ ವ್ಯವಸ್ಥೆ, ವಿದ್ಯಾನಿಧಿ ಪ್ರಕಾಶನ, ಬೆಂಗಳೂರು.
7. ಶಂಕರಪ್ಪ. ಆರ್., (೨೦೦೭), ಆಡಳಿತ ವಿಕೇಂದ್ರೀಕರಣ ಮತ್ತು ಗ್ರಾಮೀಣಾಭಿವೃದ್ಧಿ, ಅನುಜಯ ಪ್ರಕಾಶನ, ಬೆಂಗಳೂರು.



**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.



**About the License:**
© The Authors 2024. The text of this article is open access and licensed under a Creative Commons Attribution 4.0 International License.